Akashvani: Bangalore
National Bulletin In Kannada
17.10.2025 : 7.35pm
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
*******

ಮುಖ್ಯಾಂಶಗಳು

೧. ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಬುಡಕಟ್ಟು ಸಮುದಾಯ ಕೈಜೋಡಿಸಬೇಕು - ರಾಷ್ಟ್ರಪತಿ ದ್ರೌಪದಿ ಮುರ್ಮು ಕರೆ

೨. ಶ್ರೀಲಂಕಾ ಪ್ರಧಾನಿ ಡಾ. ಹರಿಣಿ ಅಮರ ಸುರಿಯಾ ಜೊತೆ ಪ್ರಧಾನಿ ನರೇಂದ್ರ ಮೋದಿ ಮಾತುಕತೆ

೩. ಜಿಎಸ್‌ಟಿ ದರಗಳ ಇಳಿಕೆಯಿಂದ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚಿದ ಅವಕಾಶ - ಸಚಿವೆ ನಿರ್ಮಲಾ ಸೀತಾರಾಮನ್

೪. ೨೦೨೯ರ ವೇಳೆಗೆ ರಕ್ಷಣಾ ಉತ್ಪಾದನೆ ೩ ಲಕ್ಷ ಕೋಟಿ ರೂಪಾಯಿಗೆ ವೃದ್ಧಿಸುವ ಗುರಿ - ಡಾ. ಸಚಿವ ರಾಜನಾಥ್ ಸಿಂಗ್

೫. ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಟೂರ್ನಿ; ಭಾರತದ ತನ್ವಿ ಶರ್ಮಾ ಸೆಮಿ ಫೈನಲ್ಸ್ ಗೆ

***************

೧೭-೧೦-೨೦೨೫ ರಾಷ್ಟ್ರೀಯ ವಾರ್ತೆಗಳು ೧೯.೩೫ ರಾಷ್ಟ್ರಪತಿ

ಬುಡಕಟ್ಟು ಜನಾಂಗ ಸ್ವಾವಲಂಬಿ ಬದುಕು ಸಾಗಿಸಲು ಆದಿ-ಕರ್ಮಯೋಗಿ ಅಭಿಯಾನ್ ಆರಂಭಿಸಲಾಗಿದೆ ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ನವದೆಹಲಿಯಲ್ಲಿಂದು ಆದಿ-ಕರ್ಮಯೋಗಿ ಅಭಿಯಾನ್ ರಾಷ್ಟ್ರೀಯ ಸಮಾವೇಶದಲ್ಲಿ ಮಾತನಾಡಿದ ಅವರು, ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಬುಡಕಟ್ಟು ಜನಾಂಗ ಕೈಜೋಡಿಸಬೇಕು. ಅಭಿವೃದ್ಧಿಯ ಫಲ ಬುಡಕಟ್ಟು ಜನಾಂಗಕ್ಕೂ ತಲುಪುವಂತಾಗಬೇಕು. ಜವಬ್ದಾರಿಯುತ ಮತ್ತು ಜನಪರ ಆಡಳಿತದ ದೃಷ್ಟಿಯಿಂದ ಬುಡಕಟ್ಟು ವ್ಯವಹಾರಗಳ ಸಚಿವಾಲಯ ಈ ಕಾರ್ಯಕ್ರಮವನ್ನು ಜಾರಿಗೊಳಿಸಿದೆ ಎಂದರು.

***************

೧೭-೧೦-೨೦೨೫ ರಾಷ್ಟ್ರೀಯ ವಾರ್ತೆಗಳು ೧೯.೩೫ ಪಿಎಂ ಶ್ರೀಲಂಕಾ

ಶ್ರೀಲಂಕಾ ಪ್ರಧಾನಿ ಡಾಕ್ಟರ್ ಹರಿಣಿ ಅಮರಸುರಿಯಾ ಅವರು ಇಂದು ನವದೆಹಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ಚರ್ಚಿಸಿದರು.

ಶ್ರೀಲಂಕಾ ಪ್ರಧಾನಿ ಅವರನ್ನು ಆತ್ಮೀಯವಾಗಿ ಬರಮಾಡಿಕೊಂಡ ಪ್ರಧಾನಿ ನರೇಂದ್ರ ಮೋದಿ, ಭಾರತ ಮತ್ತು ಶ್ರೀಲಂಕಾ ನಡುವೆ ಬಹುಹಂತದ ಐತಿಹಾಸಿಕ ಬಾಂಧವ್ಯವಿದೆ ಎಂದು ಹೇಳಿದ್ದಾರೆ.

ಈ ವರ್ಷದ ಏಪ್ರಿಲ್ ನಲ್ಲಿ ಶ್ರೀಲಂಕಾಗೆ ಭೇಟಿ ನೀಡಿರುವುದನ್ನು ಸ್ಮರಿಸಿಕೊಂಡ ಪ್ರಧಾನಿ ನರೇಂದ್ರ ಮೋದಿ ಆಗ ಶ್ರೀಲಂಕಾ ಅಧ್ಯಕ್ಷ ಅರುಣ ಕುಮಾರ ದಿಸನಾಯಕ ಅವರೊಂದಿಗೆ ಹಲವು ವಲಯಗಳಲ್ಲಿ ಸಹಕಾರ ಕುರಿತು ಚರ್ಚಿಸಿರುವುದನ್ನು ನೆನಪು ಮಾಡಿಕೊಂಡರು.

ಉಭಯ ನಾಯಕರು ಶಿಕ್ಷಣ, ತಂತ್ರಜ್ಞಾನ, ನಾವೀನ್ಯತೆ, ಮೀನುಗಾರರ ಕಲ್ಯಾಣ ಮತ್ತಿತರ ವಲಯಗಳಲ್ಲಿನ ಸಹಕಾರ ಕುರಿತು ಚರ್ಚಿಸಿದರು. ಎರಡೂ ದೇಶಗಳು ಅಭಿವೃದ್ಧಿಯ ಯಾನದಲ್ಲಿ ಒಟ್ಟಿಗೆ ಸಾಗಲು ಬದ್ಧವಾಗಿದೆ ಎಂದು ಹೇಳಿದರು.

***************

೧೭-೧೦-೨೦೨೫ ರಾಷ್ಟ್ರೀಯ ವಾರ್ತೆಗಳು ೧೯.೩೫ ನಿರ್ಮಲಾ ಸೀತಾರಾಮನ್

ನೂತನ ಗ್ರಾಮೀಣ ಭಾರತದ ಹೊಸ ಬೇಡಿಕೆಗಳನ್ನು ಪೂರೈಸಲು ಗ್ರಾಮೀಣ ಬ್ಯಾಂಕುಗಳು ಕೃಷಿ ಸಾಲ ವಿತರಣೆಯನ್ನು ಹೆಚ್ಚಿಸುವ ಅಗತ್ಯವಿದೆ ಎಂದು ಕೇಂದ್ರ ಹಣಕಾಸು ಮತ್ತು ಸಾಂಸ್ಥಿಕ ವ್ಯವಹಾರಗಳ ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ರೈತ ಉತ್ಪಾದಕ ಸಂಸ್ಥೆಗಳ ಅನುಕೂಲತೆ ಮತ್ತು ಬೇಡಿಕೆಗಳಿಗೆ ಅನುಗುಣವಾಗಿ ಗ್ರಾಮೀಣ ಬ್ಯಾಂಕುಗಳು ತಮ್ಮ ಉತ್ಪನ್ನಗಳು ಮತ್ತು ಸೇವೆಗಳನ್ನು ನವೀಕರಿಸಬೇಕು ಎಂದು ಕರೆ ನೀಡಿದ್ದಾರೆ.

ಬಳ್ಳಾರಿಯಲ್ಲಿ ಕರ್ನಾಟಕ ಗ್ರಾಮೀಣ ಬ್ಯಾಂಕ್ ನ ವ್ಯವಹಾರ ಕಾರ್ಯಕ್ಷಮತೆಯ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ತಳಮಟ್ಟದಲ್ಲಿ ಕೃಷಿ ಸಾಲವನ್ನು ವಿತರಿಸುವಲ್ಲಿ ತನ್ನ ಪಾಲನ್ನು ಹೆಚ್ಚಿಸುವಂತೆ ಅವರು ಗ್ರಾಮೀಣ ಬ್ಯಾಂಕಿಗೆ ಸಲಹೆ ನೀಡಿದರು.

ಜಿ ಎಸ್ ಟಿ ದರಗಳ ಇಳಿಕೆಯಿಂದ ಗ್ರಾಮೀಣ ಪ್ರದೇಶಗಳಲ್ಲಿ ಹೊಸ ಅವಕಾಶಗಳ ಬಾಗಿಲು ತೆರೆದಂತಾಗಿದೆ. ಪಟ್ಟಣ ಮತ್ತು ಗ್ರಾಮೀಣ ಪ್ರದೇಶಗಳ ಸಾಲದ ಅಗತ್ಯಗಳನ್ನು ಪೂರೈಸಲು ಗ್ರಾಮೀಣ ಬ್ಯಾಂಕುಗಳು ಈ ಅವಕಾಶವನ್ನು ಬಳಸಿಕೊಳ್ಳಬೇಕು ಎಂದು ಹೇಳಿದರು.

***************

೧೭-೧೦-೨೦೨೫ ರಾಷ್ಟ್ರೀಯ ವಾರ್ತೆಗಳು ೧೯.೩೫ ರಾಜನಾಥ್ ಸಿಂಗ್

ದೇಶೀಯ ನಿರ್ಮಿತ ತೇಜಸ್- ಎಂ ಕೆ ೧ ಎ ಹಗುರ ಯುದ್ಧ ವಿಮಾನವನ್ನು ನಾಸಿಕ್ ನಲ್ಲಿಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅನಾವರಣಗೊಳಿಸಿದರು.

ಭಾರತೀಯ ವಾಯುಪಡೆಯ ಮಿಗ್ - ೨೧ ವಿಮಾನಗಳಿಗೆ ಬದಲಾಗಿ ನಿರ್ಮಿಸಿರುವ ಎಲ್ ಸಿ ಎ -ಎಂ ಕೆ ೧ಎ ವಿಮಾನವು ಅತ್ಯಾಧುನಿಕವಾಗಿದ್ದು, ಬಹುಪಾತ್ರ ನಿರ್ವಹಿಸಲಿದೆ. ಈ ವಿಮಾನವು ತೇಜಸ್ ಸರಣಿಯ ಆಧುನಿಕ ಮಾದರಿಯಾಗಿದ್ದು, ಆಗಸದಲ್ಲೇ ಇಂಧನ ಭರ್ತಿ ಮಾಡಿಕೊಳ್ಳುವ ಮತ್ತು ಮತ್ತೊಂದು ವಿಮಾನಕ್ಕೆ ಇಂಧನ ತುಂಬಿಸುವ ಸಾಮರ್ಥ್ಯ ಹೊಂದಿದೆ.

ಈ ಸಂದರ್ಭದಲ್ಲಿ ರಾಜನಾಥ್ ಸಿಂಗ್ ಮಾತನಾಡಿ, ಸುಖೋಯ್ ೩೦, ಹಗುರ ಯುದ್ಧ ವಿಮಾನ ಮತ್ತು ಎಚ್ ಟಿಟಿ-೪೦, ವಿಮಾನಗಳು ನಾಸಿಕ್ ಕೇಂದ್ರದಲ್ಲಿ ನಿರ್ಮಾಣವಾಗುತ್ತಿದೆ. ೨೦೧೪ಕ್ಕೂ ಮುನ್ನ ಶೇಕಡ ೬೫ ರಿಂದ ೭೦ರಷ್ಟು ರಕ್ಷಣಾ ಸಾಮಾಗ್ರಿಗಳನ್ನು ಆಮದು ಮಾಡಿಕೊಳ್ಳಲಾಗುತ್ತಿತ್ತು. ಆದರೆ ಈಗ ದೇಶೀಯವಾಗಿ ಶೇಕಡ ೬೫ರಷ್ಟು ಸಾಮಾಗ್ರಿಗಳನ್ನು ಉತ್ಪಾದಿಸಲಾಗುತ್ತಿದೆ. ೨೦೨೯ರ ವೇಳೆಗೆ ರಕ್ಷಣಾ ಉತ್ಪಾದನೆ ೩ ಲಕ್ಷ ಕೋಟಿ ರೂಪಾಯಿಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದರು.

***************

೧೭-೧೦-೨೦೨೫ ರಾಷ್ಟ್ರೀಯ ವಾರ್ತೆಗಳು ೧೯.೩೫ ಜ್ಯೋತಿರಾಧಿತ್ಯ ಸಿಂಧಿಯಾ

ದೇಶದ ಅಭಿವೃದ್ಧಿಯಲ್ಲಿ ಈಶಾನ್ಯ ಪ್ರಾಂತ್ಯ ಇದೀಗ ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಈಶಾನ್ಯ ಪ್ರಾಂತ್ಯ ಅಭಿವೃದ್ಧಿ ಸಚಿವ ಜ್ಯೋತಿರಾಧಿತ್ಯ ಸಿಂಧಿಯಾ ಹೇಳಿದ್ದಾರೆ.

ದೆಹಲಿಯಲ್ಲಿಂದು ತಮ್ಮ ಸಚಿವಾಲಯದ ಒಂದು ವರ್ಷದ ಸಾಧನೆ ವಿವರಿಸಿದ ಅವರು ಕಳೆದ ೧೧ ವರ್ಷಗಳಲ್ಲಿ ಈಶಾನ್ಯ ಪ್ರಾಂತ್ಯದ ಸಾಮರ್ಥ್ಯವನ್ನು ಜಾಗತಿಕ ವೇದಿಕೆಯಲ್ಲಿ ತರಲಾಗಿದೆ. ೭ ವರ್ಷಗಳ ಹಿಂದೆ ಈ ಭಾಗದಲ್ಲಿ ೯ರಷ್ಟಿದ್ದ ವಿಮಾನ ನಿಲ್ದಾಣಗಳ ಸಂಖ್ಯೆ ಇದೀಗ ೧೭ಕ್ಕೆ ಏರಿದೆ. ಹಾಗೆಯೇ ೧೦ ಸಾವಿರ ಕಿಲೋ ಮೀಟರ್ ನಷ್ಟಿದ್ದ ರಾಷ್ಟ್ರೀಯ ಹೆದ್ದಾರಿ ಮಾರ್ಗ ೧೬ ಸಾವಿರ ಕಿಲೋ ಮೀಟರ್ ಗೆ ಹೆಚ್ಚಿದೆ ಎಂದರು.

ಈಶಾನ್ಯ ಪ್ರಾಂತ್ಯದಲ್ಲಿ ಹೂಡಿಕೆ ಮತ್ತು ಅಭಿವೃದ್ಧಿ ಸಾಮರ್ಥ್ಯ ಹೆಚ್ಚಿಸಲು ಅನೇಕ ಉಪಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಕಳೆದ ಮೇ ನಲ್ಲಿ ನಡೆದ ರೈಸಿಂಗ್ ನಾರ್ಥ್ ಈಸ್ಟ್ ಶೃಂಗಸಭೆಯ ವೇಳೆ ನಾಲ್ಕು ಲಕ್ಷದ ೪೮ ಸಾವಿರ ಕೋಟಿ ರೂಪಾಯಿ ಹೂಡಿಕೆ ಪ್ರಕಟಿಸಲಾಗಿದೆ. ಅಷ್ಟಲಕ್ಷ್ಮಿ ದರ್ಶನ ಕಾರ್ಯಕ್ರಮದಡಿ ದೇಶಾದ್ಯಂತದ ೩ ಸಾವಿರದ ೨೦೦ ವಿದ್ಯಾರ್ಥಿಗಳು ಸಾಂಸ್ಕೃತಿಕ ವಿನಿಮಯಕ್ಕಾಗಿ ಈಶಾನ್ಯ ರಾಜ್ಯಗಳಿಗೆ ಪ್ರವಾಸ ಕೈಗೊಳ್ಳಲಿದ್ದಾರೆ ಎಂದರು.

***************

೧೭-೧೦-೨೦೨೫ ರಾಷ್ಟ್ರೀಯ ವಾರ್ತೆಗಳು ೧೯.೩೫ ಅಮಿತ್ ಶಾ

ಪ್ರಧಾನಿ ನರೇಂದ್ರ ಮೋದಿ ಅವರು ಜಮ್ಮು-ಕಾಶ್ಮೀರದಲ್ಲಿ ಸಂವಿಧಾನದ ೩೭೦ನೇ ವಿಧಿ ರದ್ದುಗೊಳಿಸಿ, ಕಾಶ್ಮೀರವನ್ನು ದೇಶದ ಮುಖ್ಯ ವಾಹಿನಿಗೆ ಜೋಡಿಸಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಬಿಹಾರದ ಸರನ್ ನಲ್ಲಿಂದು ಚುನಾವಣಾ ಪ್ರಚಾರ ಸಭೆ ಉದ್ದೇಶಿಸಿ ಅವರು, ಕಳೆದ ೨೦ ವರ್ಷಗಳಲ್ಲಿ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಬಿಹಾರದಲ್ಲಿ ಭ್ರಷ್ಟಾಚಾರ, ಮಾಫಿಯಾ ಮತ್ತು ಇತರೆ ಅಕ್ರಮಗಳಿಗೆ ಕಡಿವಾಣ ಹಾಕಿದ್ದಾರೆ. ಎನ್ ಡಿಎ ಆಡಳಿತಾವಧಿಯಲ್ಲಿ ಅನೇಕ ಕಲ್ಯಾಣ ಯೋಜನೆಗಳು ಜಾರಿಗೊಂಡು ರಾಜ್ಯ ಅಭಿವೃದ್ಧಿಯತ್ತ ಸಾಗುತ್ತಿದೆ ಎಂದರು.

ಈ ಬಾರಿ ಎನ್ ಡಿ ಎ ಮೈತ್ರಿಕೂಟ ಹೆಚ್ಚಿನ ಬಹುಮತದೊಂದಿಗೆ ಅಧಿಕಾರ ಹಿಡಿಯಲಿದೆ ಎಂದರು. ಇದಕ್ಕೂ ಮುನ್ನ ಪಾಟ್ನಾದಲ್ಲಿ ಅಮಿತ್ ಶಾ ಅವರು ನಿತೀಶ್ ಕುಮಾರ್ ಅವರೊಂದಿಗೆ ಚುನಾವಣೆ ಪ್ರಚಾರ ಮತ್ತು ಇತರೆ ಚುನಾವಣಾ ವಿಷಯಗ ಕುರಿತು ನಿತೀಶ್ ಕುಮಾರ್ ಅವರೊಂದಿಗೆ ಮಾತುಕತೆ ನಡೆಸಿದರು.

***************

೧೭-೧೦-೨೦೨೫ ರಾಷ್ಟ್ರೀಯ ವಾರ್ತೆಗಳು ೧೯.೩೫ ಮೆಗಾಡೇರಿ

ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಇಂದು ಹಾಸನ ಡೇರಿಗೆ ಭೇಟಿ ನೀಡಿದರು. ಬಳಿಕ ನೂತನವಾಗಿ ನಿರ್ಮಾಣವಾಗುತ್ತಿರುವ ಮೆಗಾಡೇರಿ ಕಾಮಗಾರಿ ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಮಾಜಿ ಸಚಿವ ಹೆಚ್.ಡಿ. ರೇವಣ್ಣ, ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡರು ಮತ್ತು ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

***************

೧೭-೧೦-೨೦೨೫ ರಾಷ್ಟ್ರೀಯ ವಾರ್ತೆಗಳು ೧೯.೩೫ ಛತ್ತೀಸ್‌ಗಡ

ಛತ್ತೀಸ್‌ಗಢದಲ್ಲಿ ೨೦೮ ನಕ್ಸಲರು ಶಸ್ತ್ರಾಸ್ತ್ರಗಳೊಂದಿಗೆ ಪೊಲೀಸರ ಮುಂದೆ ಶರಣಾಗಿದ್ದಾರೆ. ಜಗ್ದಾಲ್‌ಪುರದ ಪೊಲೀಸ್ ಕೇಂದ್ರ ಕಚೇರಿಯಲ್ಲಿ ೧೫೩ ಶಸ್ತ್ರಾಸ್ತ್ರಗಳೊಂದಿಗೆ ಶರಣಾದ ನಕ್ಸಲಿಯರನ್ನು ಸಂವಿಧಾನ ಪುಸ್ತಕ ನೀಡಿ ಸಮಾಜದ ಮುಖ್ಯ ವಾಹಿನಿಗೆ ಬರಮಾಡಿಕೊಳ್ಳಲಾಯಿತು.

ಶರಣಾಗತಿಯಾದ ನಕ್ಸಲರಲ್ಲಿ ಮಹಿಳೆಯರು ಸೇರಿದ್ದಾರೆ. ಇದರೊಂದಿಗೆ ಅಭುಜ್ ಮದ್ ಪ್ರಾಂತ್ಯ, ಬಹುತೇಕ ನಕ್ಸಲ್ ಪ್ರಭಾವದಿಂದ ಮುಕ್ತವಾಗಿದೆ. ನಕ್ಸಲರಿಗೆ ಪುನರ್ ವಸತಿ ಕಲ್ಪಿಸಿ ಸಮಾಜದ ಮುಖ್ಯ ವಾಹಿನಿಗೆ ಸೇರಿಸುವ ಪೊಲೀಸರು ಮತ್ತು ಭದ್ರತಾ ಪಡೆಗಳ ಯತ್ನಗಳಿಗೆ ಯಶಸ್ಸು ಸಿಕ್ಕಿದೆ.

***************

೧೭-೧೦-೨೦೨೫ ರಾಷ್ಟ್ರೀಯ ವಾರ್ತೆಗಳು ೧೯.೩೫ ಬಿಹಾರ ಚುನಾವಣೆ

ಬಿಹಾರದಲ್ಲಿ ಮುಕ್ತ, ನ್ಯಾಯಸಮ್ಮತ ಚುನಾವಣೆ ನಡೆಸುವ ಹಿನ್ನೆಲೆಯಲ್ಲಿ ಚುನಾವಣಾ ಅಕ್ರಮಗಳಿಗೆ ಕಡಿವಾಣ ಹಾಕಲು ಚುನಾವಣಾ ಆಯೋಗ ವ್ಯಾಪಕ ಕಣ್ಗಾವಲು ಹಾಕಿದೆ. ವಿಧಾನ ಸಭಾ ಚುನಾವಣೆ ಹಿನ್ನೆಲೆಯಲ್ಲಿ ಚುನಾವಣಾ ಆಯೋಗ, ನಗದು, ಮಾದಕ ದ್ರವ್ಯ, ಮದ್ಯ ಸೇರಿದಂತೆ ಇನ್ನಿತರ ಆಮಿಷ ವಸ್ತುಗಳ ಸಾಗಾಟ ತಡೆಗಟ್ಟುವ ನಿಟ್ಟಿನಲ್ಲಿ ಕಾನೂನು ಜಾರಿ ಪ್ರಾಧಿಕಾರಗಳ ಮುಖ್ಯಸ್ಥರೊಂದಿಗೆ ಮಹತ್ವದ ಸಭೆ ನಡೆಸಿತು.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಹಲವಾರು ಇಲಾಖೆಗಳ ಮುಖ್ಯಸ್ಥರು ಭಾಗವಹಿಸಿ ಮತದಾನ ಪ್ರಕ್ರಿಯೆಯನ್ನು ಬಲಿ? ಮತ್ತು ದೋ?ರಹಿತವಾಗಿಸಲು ತಮ್ಮ ಸಲಹೆಗನ್ನು ನೀಡಿದರು.

ಬಿಹಾರದ ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕರು ಸಹ ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿಯೊಂದಿಗೆ ವೀಡಿಯೊ ಕಾನ್ಫರೆನ್ಸ್ ಮೂಲಕ ಸಭೆಯಲ್ಲಿ ಭಾಗವಹಿಸಿದ್ದರು.

***************

೧೭-೧೦-೨೦೨೫ ರಾಷ್ಟ್ರೀಯ ವಾರ್ತೆಗಳು ೧೯.೩೫ ಗುಜರಾತ್-ಸಚಿವ ಸಂಪುಟ

ಗುಜರಾತ್ ನಲ್ಲಿ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್ ತಮ್ಮ ಸಚಿವ ಸಂಪುಟವನ್ನು ಪುನರ್ ರಚಿಸಿದ್ದಾರೆ.

ಗಾಂಧಿನಗರದ ಮಹಾತ್ಮ ಮಂದಿರದಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಜ್ಯಪಾಲ ಆಚಾರ್ಯ ದೇವವ್ರತ್ ಅವರು ೨೧ ಸಚಿವರಿಗೆ ಪ್ರಮಾಣವಚನ ಬೋಧಿಸಿದರು. ಹರ್ಷ್ ಸಾಂಗ್ವಿ ಅವರು ಉಪ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಸಮಾರಂಭದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸೇರಿದಂತೆ ಪಕ್ಷದ ನಾಯಕರು ಹಾಗೂ ಗಣ್ಯರು ಉಪಸ್ಥಿತರಿದ್ದರು. ಸಂಪುಟ ಪುನಾರಚನೆಗೆ ಮುನ್ನ ಗುಜರಾತ್‌ನ ಎಲ್ಲಾ ೧೬ ಸಚಿವರು ನಿನ್ನೆ ಮುಖ್ಯಮಂತ್ರಿ ಅವರಿಗೆ ತಮ್ಮ ರಾಜೀನಾಮೆ ಸಲ್ಲಿಸಿದ್ದರು. ನೂತನ ಸಚಿವ ಸಂಪುಟದಲ್ಲಿ ಹೊಸಬರಿಗೆ ಹೆಚ್ಚಿನ ಅವಕಾಶ ನೀಡಲಾಗಿದೆ. ವಿಶೇಷವಾಗಿ ಯುವ ಶಾಸಕರಿಗೆ ಆದ್ಯತೆ ನೀಡಲಾಗಿದೆ.

***************

೧೭-೧೦-೨೦೨೫ ರಾಷ್ಟ್ರೀಯ ವಾರ್ತೆಗಳು ೧೯.೩೫ ವಿಶ್ವ ಆರೋಗ್ಯ ಸಂಸ್ಥೆ

ಸೀಸದ ಅಂಶವು ಜಾಗತಿಕ ಆರೋಗ್ಯಕ್ಕೆ ಗಂಭೀರ ಬೆದರಿಕೆಯಾಗಿಯೇ ಉಳಿದಿದೆ ಮತ್ತು ಲಕ್ಷಾಂತರ ಮಕ್ಕಳು ಮತ್ತು ವಯಸ್ಕರ ಮೇಲೆ ಪರಿಣಾಮ ಬೀರುತ್ತಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ, ಹೆಚ್ಚುತ್ತಿರುವ ಸಮಸ್ಯೆಯನ್ನು ಪರಿಹರಿಸುವ ನಿಟ್ಟಿನಲ್ಲಿ ತಕ್ಷಣವೇ ಕ್ರಮ ಕೈಗೊಳ್ಳುವಂತೆ ಕರೆ ನೀಡಿದೆ.

ಬಣ್ಣ, ಬ್ಯಾಟರಿಗಳು, ಸೌಂದರ್ಯ ವರ್ಧಕಗಳು ಮತ್ತು ಮಸಾಲೆಗಳು ಸೇರಿದಂತೆ ಹಲವಾರು ದೈನಂದಿನ ವಸ್ತುಗಳಲ್ಲಿ ಸೀಸವು ಕಂಡುಬರುತ್ತಿದೆ. ಇದು ಗಾಳಿ, ನೀರು ಮತ್ತು ಮಣ್ಣನ್ನು ಕಲುಷಿತಗೊಳಿಸುತ್ತದೆ, ಇದರ ಪರಿಣಾಮವಾಗಿ ವಿಶ್ವಾದ್ಯಂತ ಸಮುದಾಯಗಳಲ್ಲಿ ನಿರಂತರ ಸಮಸ್ಯೆ ಉಂಟಾಗುತ್ತದೆ. ಇದು ವಾರ್ಷಿಕವಾಗಿ ಸುಮಾರು ೧.೫ ದಶಲಕ್ಷ ಸಾವುಗಳಿಗೆ ಕಾರಣವಾಗುತ್ತಿದೆ.

ಪ್ರಾಥಮಿಕವಾಗಿ ಹೃದಯರಕ್ತನಾಳದ ಕಾಯಿಲೆಯಿಂದ ಇದು ಆರಂಭವಾಗಿ ದೈಹಿಕವಾಗಿ ವ್ಯಾಪಕ ಹಾನಿ ಉಂಟು ಮಾಡುತ್ತದೆ. ಕಲಿಕೆಯ ತೊಂದರೆಗಳು ಮತ್ತು ನಡವಳಿಕೆಯ ಸಮಸ್ಯೆಗಳಿಗೂ ಕಾರಣವಾಗುತ್ತದೆ. ಸೀಸದ ಅಂಶವು ಬೆಳವಣಿಗೆಯಾಗುತ್ತಿರುವ ಭ್ರೂಣಕ್ಕೂ ಹಾನಿ ಉಂಟು ಮಾಡುತ್ತದೆ.

***************

೧೭-೧೦-೨೦೨೫ ರಾಷ್ಟ್ರೀಯ ವಾರ್ತೆಗಳು ೧೯.೩೫ ಬ್ಯಾಡ್ಮಿಂಟನ್

ಗುವಾಹತಿಯಲ್ಲಿ ನಡೆಯುತ್ತಿರುವ ಬಿಡಬ್ಲ್ಯೂಎಫ್ ವಿಶ್ವ ಜೂನಿಯರ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಭಾರತದ ಅಗ್ರ ಶ್ರೇಯಾಂಕಿತ ಆಟಗಾರ್ತಿ ತನ್ವಿ ಶರ್ಮಾ, ಜಪಾನ್ ನ ಸಕಿ ಮತ್ಸುಮೊಟೊ ವಿರುದ್ಧ ರೋಚಕ ಜಯ ಸಾಧಿಸಿ ಸೆಮಿ ಫೈನಲ್ಸ್ ಗೆ ಲಗ್ಗೆ ಇಟ್ಟಿದ್ದಾರೆ.

ತನ್ವಿ ಶರ್ಮಾ ೧೩-೧೫, ೧೫-೯, ೧೫-೧೦ ರ ಅಂತರದಲ್ಲಿ ಗೆಲುವು ಸಾಧಿಸಿದರು. ಮಿಶ್ರ ಡಬಲ್ಸ್ ನಲ್ಲಿ ಭವ್ಯ ಚಬ್ರಾ, ವಿಶಾಖ ತೊಪ್ಪೊ ಜೋಡಿ ಚೀನಾದ ತೈಪೆಯ ಹುಂಗ್ ಬಿಂಗ್ ಹು ಹಾಗೂ ಚೌ ಯುನ್ ಅನ್ ವಿರುದ್ಧ ೯-೧೫ ಹಾಗೂ ೭-೧೫ ರ ಅಂತರದಲ್ಲಿ ಪರಾಭವಗೊಂಡಿತು.

***************

೧೭-೧೦-೨೦೨೫ ರಾಷ್ಟ್ರೀಯ ವಾರ್ತೆಗಳು ೧೯.೩೫ ಕ್ರಿಕೆಟ್

ಕೊಲಂಬೋದ ಆರ್.ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಐಸಿಸಿ ಮಹಿಳಾ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಟಾಸ್ ಗೆದ್ದ ಶ್ರೀಲಂಕಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿದೆ.

ಶ್ರೀಲಂಕಾ ೧೨ ಓವರ್‌ಗಳಲ್ಲಿ ೨ ವಿಕೆಟ್‌ನಷ್ಟಕ್ಕೆ ೪೬ ರನ್ ಗಳಿಸಿದ ಸಂದರ್ಭದಲ್ಲಿ ಸುರಿದ ಮಳೆಯಿಂದಾಗಿ ಆಟವನ್ನು ಸದ್ಯ ಸ್ಥಗಿತಗೊಳಿಸಲಾಗಿದೆ. ಕಳೆದ ರಾತ್ರಿ ವಿಶಾಖಪಟ್ಟಣಂ ನಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಬಾಂಗ್ಲಾದೇಶದ ವಿರುದ್ಧ ೧೦ ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದ ಆಸ್ಟ್ರೇಲಿಯಾದ ವನಿತೆಯರು ಸೆಮಿ ಫೈನಲ್ಸ್‌ಗೆ ಲಗ್ಗೆ ಇಟ್ಟಿದ್ದಾರೆ.

***************